# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-7449/2014/ಡಿ.ಆರ್.ಇ-2 ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/11/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಸಾರ್ವಜನಿಕರ ಬೇಡಿಕೆ ಹಾಗೂ ಪ್ರತಿನಿತ್ಯ ಓಡಾಡುವ ಜನರ ಜನಸಂಖ್ಯೆಯ ಅಂದಾಜು ಆಧಾರವನ್ನಿಟ್ಟುಕೊಂಡು, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮತ್ತು ಇತರೆ ಸಾರ್ವಜನಿಕರಿಗೆ ಅನುಕೂಲಕರವಾಗುವ ಸಾರಿಗೆ ವ್ಯವಸ್ಥೆಯನ್ನು ಒದಗಿಸುವಂತೆ ಮತ್ತು ಅನಧಿಕೃತವಾಗಿ ಸಾರ್ವಜನಿಕರಿಗೆ ತೊಂದರೆ ಕೊಡುವ ರೀತಿಯಲ್ಲಿ ಓಡಾಡುತ್ತಿರುವ ಖಾಸಗಿ ಬಸ್‌ಗಳ ಮಾಲೀಕರ ಮೇಲೆ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಕುಂಞ ಪಾತು, ಕಾಮಜಾಲು ಮನೆ, ಮಾಣಿಲ ಗ್ರಾಮ ಮುರುವ ಅಂಚೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪ್ರಾದೇಶಿಕ ಸಾರಿಗೆ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಪೆರುವಾಯಿ-ಮಾನಿಲಾ ಗ್ರಾಮ ಕುಗ್ರಾಮವೆಂದು ಉದಯವಾಣಿ ಸ್ಪರ್ಧೆಯಲ್ಲಿ ಗುರುತಿಸಲ್ಪಡಲಾಗಿದೆ, ಸದರಿ ಗ್ರಾಮಕ್ಕೆ 1975ನೇ ಇಸ್ವಿ ವೇಳೆಗೆ ಸಾರ್ವಜನಿಕರು ಹರಸಾಹಸಪಟ್ಟು ಕೆ.ಎಸ್.ಆರ್.ಟಿ.ಸಿ., ಸೇವೆ ಪಡೆದುಕೊಂಡಿದ್ದೆವು, ಅದು ಮನೊಪಲಿ ರೂಟ್ ಆಗಿತ್ತು. 1996ರ ನಂತರ ಖಾಸಗಿ ಬಸ್ ಸೇವೆ ತಮ್ಮ ಊರಿಗೆ ಪ್ರಾರಂಭವಾಯಿತು, ನಂತರ ಕೆ.ಎಸ್.ಆರ್.ಟಿ.ಸಿ., ಬಸ್ ಸೌಲಭ್ಯ ನಿರ್ಮಾಣವಾಯಿತು, ಕಾಲಕ್ರಮೇಣ ಗುರುದೇವ ಎಂಬ ಹೆಸರಿನ

ಖಾಸಗಿ ಬಸ್ ಸಾರಿಗೆ ಸೇವೆಯಲ್ಲಿ ತನಗೆ ಇಷ್ಟ ಬಂದಂತೆ ನಡೆಸುತ್ತಿದ್ದು, ಮತ್ತು ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಮೇಲೆ ಹಲವು ದೌರ್ಜನ್ಯಗಳು ನಡೆದವು ನಂತರ ಪುನ: ಅಂತಹ ಘಟನೆಗಳಿಂದ ಬೇಸತ್ತು ಕೆ.ಎಸ್.ಆರ್.ಟಿ.ಸಿ., ಸೇವೆಯನ್ನು ಪಡೆದುಕೊಂಡೆವು, ಆದರೆ ಖಾಸಗಿ ಬಸ್ ಸಿಬ್ಬಂದಿಗಳೂ ಕೆ.ಎಸ್.ಆರ್.ಟಿ.ಸಿ., ಬಸ್‌ನ ಸಿಬ್ಬಂದಿಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಈ ಬಗ್ಗೆ ಎದುರುದಾರರಿಗೆ ದೂರವಾಣಿ/ಲಿಖಿತ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ, ಸೂಕ್ತ ಕ್ರಮ ಜರುಗಿಸಿ ಎಂದು ಕೋರಿದ್ದಾರೆ.

3. ದೂರುದಾರರು ತಮ್ಮ ದೂರಿನ ಜೊತೆಗೆ ದಿನಾಂಕ: 09/08/2014 ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರಿಗೆ ಪೆರುವಾಯಿ–ಮಾನಿಲಾ ಗ್ರಾಮಸ್ಥರು ನೀಡಿರುವ ದೂರಿನ ಪ್ರತಿಯನ್ನು ಕೆಎ19–ಎಸಿ–9993 ಮತ್ತು ಕೆಎ19–ಎಸಿ–9994 ಬಸ್‌ನ ಓಡಾಡುವ ಸಮಯದ ದಾಖಲೆಯ ಪ್ರತಿಯನ್ನು, ದಿನಾಂಕ: 23/08/2011 ರಂದು ವಿಟ್ಲ ಗ್ರಾಮ ಪಂಚಾಯತಿಯ ಕೆ.ಎಸ್.ಆರ್.ಟಿ.ಸಿ., ಬಸ್ ಸೇವೆ ಕೊಡಿಸುವ ಬಗ್ಗೆ ತೆಗೆದುಕೊಂಡ ನಿರ್ಣಯದ ಪ್ರತಿ, ದಿನಾಂಕ: 22/08/2014 ರಂದು ಪಿ.ಡಿ.ಓ., ರವರು ಜಿಲ್ಲಾಧಿಕಾರಿಗಳಿಗೆ ನೀಡಿರುವ ದೂರು, 09/01/2014 ರಂದು ಎದುರುದಾರರು ಗುರುದೇವ್ ಆಟೋ ವರ್ಕ್ಸ್, ಬಿ.ಸಿ. ರೋಡ್ ರವರಿಗೆ ನೀಡಿದ ನೋಟಿಸ್, 04/12/2013 ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರು ಎದುರುದಾರರಿಗೆ ಬರೆದ ಪತ್ರವನ್ನು ಹಾಜರುಪಡಿಸಿದ್ದಾರೆ.

4. ದಿನಾಂಕ: 21/11/2014 ರಂದು ಗೌರವಾನ್ವಿತ ಲೋಕಾಯುಕ್ತರು ಮಾಡಿದ ಆದೇಶದಂತೆ ಎದುರುದಾರರಿಗೆ ವರದಿ ಸಲ್ಲಿಸಲು ಕೋರಿದಾಗ, ಎದುರುದಾರರು ಮಧ್ಯಂತರ ವರದಿಯನ್ನು ಸಲ್ಲಿಸಿದ್ದಾರೆ, ಅದರಲ್ಲಿ ಮೋಟಾರು ವಾಹನ ನಿರೀಕ್ಷಕರು ಸದರಿ ವಾಹನದ ತಪಾಸಣೆ ಮಾಡಿ ವಾಹನ ದಾಖಲೆಗಳನ್ನು ಪರಿಶೀಲಿಸಿ ದಂಡ ವಿಧಿಸಿದ್ದಾರೆ. ಅಲ್ಲದೇ, ಸದರಿ ಖಾಸಗಿ ಬಸ್‌ನ ಸಿಬ್ಬಂದಿಯವರಿಗೆ ಸರಿಯಾದ ಸಮಯಕ್ಕೆ ಬಸ್‌ನ್ನು ಓಡಿಸಲು ಹಾಗೂ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಅಂತಿಮ ವರದಿಯಲ್ಲಿ ಸಹಿತ ಖಾಸಗಿ ಸಿಬ್ಬಂದಿಯವರಿಗೆ ಸರಿಯಾದ ಸಮಯಕ್ಕೆ ಬಸ್ ಓಡಿಸಲು ಹಾಗೂ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

5. ದೂರುದಾರರು ಸದರಿ ವರದಿಗಳಿಗೆ ತಮ್ಮ ಪ್ರತ್ಯುತ್ತರ ಸಲ್ಲಿಸಿ ಖಾಸಗಿ ಬಸ್‌ನವರಿಗೆ ದಂಡ ವಿಧಿಸಿ ಸೂಚನೆ ನೀಡಿದರೂ ಸಹಿತ ಸರಿಯಾದ ಸಮಯಕ್ಕೆ ಅಂದರೆ ವೇಳಾ ಪಟ್ಟಿಯಂತೆ ಬಸ್‌ನ್ನು ಓಡಿಸುತ್ತಿಲ್ಲ, ಅಲ್ಲದೇ ತಮ್ಮ ಮನಸಿಗೆ ಬಂದ ಸಮಯದಲ್ಲಿ ಬಸ್‌ಗಳನ್ನು ಓಡಿಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ, ಆದ್ದರಿಂದ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

6. ದಿನಾಂಕ: 11/10/2017 ರಂದು ಮಂಗಳೂರಿನಲ್ಲಿ ನಡೆದ ಕ್ಯಾಂಪ್‌ನಲ್ಲಿ ದೂರುದಾರ, ಕೆ.ಎಸ್.ಆರ್.ಟಿ.ಸಿ.,ಯ ವಿಭಾಗೀಯ ನಿಯಂತ್ರಕರು ಹಾಗೂ ಡಿ.ಸಿ.ಪಿ., ಮಂಗಳೂರು ರವರು ಹಾಜರಾಗಿದ್ದರು. ಸದರಿ ಕ್ಯಾಂಪ್‌ನಲ್ಲಿ ಹಾಜರಿದ್ದ ಕೆ.ಎಸ್.ಆರ್.ಟಿ.ಸಿ.,ಯ ವಿಭಾಗೀಯ ನಿಯಂತ್ರಕರು ಹಾಗೂ ಡಿ.ಸಿ.ಪಿ., ಮಂಗಳೂರು ದೂರುದಾರರ ಗ್ರಾಮಕ್ಕೆ ಕೆ.ಎಸ್.ಆರ್.ಟಿ.ಸಿ., ಬಸ್‌ನ ಸೌಲಭ್ಯವನ್ನು ಒದಗಿಸುವ ಬಗ್ಗೆ ಪರಿಶೀಲಿಸುತ್ತೇನೆ ಹಾಗೂ ಕಾನೂನು ಬಾಹಿರವಾಗಿ ಓಡಿಸುತ್ತಿರುವ ಖಾಸಗಿ ಸಾರಿಗೆ ಬಸ್‌ಗಳ ವಿರುದ್ಧ ಪ್ರಾದೇಶಿಕ ಸಾರಿಗೆ ಆಯುಕ್ತರ ಸಹಕಾರ ಹಾಗೂ ಪೋಲೀಸ್‌ರ ಸಹಕಾರದೊಂದಿಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಿದ್ದಾರೆ. ಹಾಜರಿದ್ದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಾನೂನು ಬಾಹಿರವಾಗಿ ಓಡಿಸುತ್ತಿರುವ ಬಸ್‌ಗಳ ವಿರುದ್ಧ ತಾವು ಕ್ರಮ ಕೈಗೊಳ್ಳುತ್ತೇವೆಮದು ತಿಳಿಸಿರುತ್ತಾರೆ ಮತ್ತು ಡಿ.ಸಿ.ಪಿ., ರವರು ಸಾರಿಗೆ ಇಲಾಖೆಯವರು ಮತ್ತು ಕೆ.ಎಸ್.ಆರ್.ಟಿ.ಸಿ., ರವರು ಕಾನೂನು ಬಾಹಿರ ಬಸ್‌ಗಳ ಓಡಾಟ ತಡೆಯಲು ಕೋರುವ ಎಲ್ಲಾ ಸಹಾಯಕ್ಕೆ ತಾವು ಸ್ಪಂದಿಸುತ್ತೇವೆಂದು ತಿಳಿಸಿದ್ದಾರೆ.

7. ಕೆ.ಎಸ್.ಆರ್.ಟಿ.ಸಿ.,ಯ ವಿಭಾಗೀಯ ನಿಯಂತ್ರಕರು ಜಪ್ತಿ ಪಡಿಸಿದ ಖಾಸಗಿ ಬಸ್‌ಗಳನ್ನು ನಿಲ್ಲಿಸಲು ಜಾಗದ ಕೊರತೆ ಇರುತ್ತದೆ ಜಿಲ್ಲಾಧಿಕಾರಿಗಳು, ಜಾಗವನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆಂದು ತಿಳಿಸಿದ್ದಾರೆ.

8. ಆದ್ದರಿಂದ, ಕಾನೂನು ಬಾಹಿರ ಖಾಸಗಿ ಬಸ್‌ಗಳ ಸಂಚಾರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಕೆ.ಎಸ್.ಆರ್.ಟಿ.ಸಿ., ನಷ್ಟದಲ್ಲಿದೆ, ಅದನ್ನು ಸವಾಲಾಗಿ ಸ್ವೀಕರಿಸಿ ಕಾನೂನು ಬಾಹಿರ ಖಾಸಗಿ ಬಸ್‌ಗಳ ಓಡಾಟವನ್ನು ತಡೆಯುವುದು ಅತ್ಯಗತ್ಯವಾಗಿದೆ. ಆದ್ದರಿಂದ, ಕೆ.ಎಸ್.ಆರ್.ಟಿ.ಸಿ., ಮಂಗಳೂರು ಪೋಲೀಸ್‌ರು ಹಾಗೂ ಆರ್.ಟಿ.ಓ., ರವರೆಲ್ಲರ ಸಹಯೋಗದಿಂದ ಕಾರ್ಯಾಚರಣೆ

ಮಾಡಿ ಕಾನೂನು ಬಾಹಿರವಾಗಿ ಓಡಾಡುತ್ತಿರುವ ಖಾಸಗಿ ಬಸ್‌ಗಳನ್ನು ತಡೆದು ತೆಗೆದುಕೊಂಡ ವರದಿಯನ್ನು ಹಾಜರುಪಡಿಸಿರುವಂತೆ ನಿರ್ದೇಶನ ನೀಡಿ ದಿನಾಂಕ: 10/11/2017ಕ್ಕೆ ದಿನಾಂಕ ನಿಗಧಿಪಡಿಸಲಾಗಿತ್ತು.

9. ದಿನಾಂಕ: 23/07/2019 ರಂದು ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ರವರು ಹಿರಿಯ ಮೋಟಾರ್ ವಾಹನ ನಿರೀಕ್ಷಕರ ಟಿಪ್ಪಣಿಯನ್ನು ತಮ್ಮ ಪತ್ರದೊಂದಿಗೆ ಸಲ್ಲಿಸಿದ್ದಾರೆ. ಸದರಿ ಲಗತ್ತು ಪತ್ರದಲ್ಲಿ ದಿನಾಂಕ: 22/11/2018 ರಂದು ತಾನು ಬಾವಲಿಮೂಲೆ ಪ್ರದೇಶಕ್ಕೆ ಬೇಟಿ ನೀಡಿದ್ದು, ಸದರಿ ಪ್ರದೇಶದಲ್ಲಿ ಈ ಹಿಂದೆ 3 ಬಸ್‌ಗಳು ಸಂಚಾರ ಮಾಡುತ್ತಾ ಇದ್ದು, ಈಗ ಸದರಿ ರಸ್ತೆಯಲ್ಲಿ ಕೆಎ19–ಎಸಿ–9994 ಮತ್ತು ಕೆಎ19–ಎಸಿ–1774 ಎರಡು ಬಸ್‌ಗಳು ಮಾತ್ರ ನಿಗಧಿತ ಸಮಯದಲ್ಲಿ ಓಡಾಟ ಮಾಡುತ್ತಿವೆ. ಸದರಿ ಓಡಾಟ ಮಾಡದ ಬಸ್ ಬಗ್ಗೆ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ಬಂಟ್ವಾಳದಲ್ಲಿ ವಿಚಾರಿಸಿದಾಗ ಸದರಿ ಬಸ್ ಆಧ್ಯಾರ್ಪಣಕ್ಕೆ ಒಳಪಟ್ಟು ನಿಲ್ಲಿಸಿರುವುದಾಗಿ ತಿಳಿದುಬಂತು. ಸದರಿ ಪ್ರದೇಶವಾದ ಬಾವುಲಿ ಮೂಲಿಯಲ್ಲಿ ವಿಚಾರಿಸಿದಾಗ ಹಾಗೂ ಪರಿಶಿಲಿಸಿದಾಗ, ಸದರಿ ಪ್ರದೇಶ ಗುಡ್ಡ ಕಾಡುಗಳಿಂದ ಕೂಡಿದ್ದು, ಮಹಿಳೆಯರು, ಮಕ್ಕಳು ಮತ್ತು ಇತರೆ ಸಾರ್ವಜನಿಕರು ನಡೆದಾಡಿಕೊಂಡು ಬರುತ್ತಿದ್ದು, ಹೆಚ್ಚುವರಿ ಬಸ್‌ನ ಬೇಡಿಕೆ ಇಟ್ಟಿರುತ್ತಾರೆ. ಆಧ್ಯಾರ್ಪಣೆಗೊಂಡ ಬಸ್‌ನ ಮಾಲೀಕರನ್ನು ವಿಚಾರಿಸಲಾಗಿ ಸದರಿ ಬಸ್‌ನ್ನು ಜನವರಿ 1ರಿಂದ ಬಿಡುಗೊಡೆಗೊಳಿಸಿ ರಸ್ತೆ ಮೇಲೆ ಓಡಿಸುವುದಾಗಿ ತಿಳಿಸಿರುತ್ತಾರೆ. ಬಾವಲಿಮೂಲೆ ಪಕ್ಕದಲ್ಲಿರುವ ಪಕ್ಕಳಕುಂಜಕ್ಕೆ 3 ಕೆ.ಎಸ್.ಆರ್.ಟಿ.ಸಿ., ಬಸ್‌ಗಳ ಸಂಚಾರವಿದ್ದು, ಬಾವಲಿಮೂಲೆಗೆ ಬರಬೇಕೆಂದು ಜನ ಅಪೇಕ್ಷೆ ಪಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಂದು ಉಲ್ಲೇಖಿಸಿದ್ದಾರೆ. ದಿನಾಂಕ: 20/07/2019ರ ವರದಿಯಲ್ಲಿ ಈ ಹಿಂದಿನ ವರದಿಯಲ್ಲಿನ ಸಂಗತಿಗಳನ್ನು ಉಲ್ಲೇಖಿಸಿದ್ದಾರೆ.

10. ದಿನಾಂಕ: 08/08/2019ರ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಪತ್ರವನ್ನು ಪರಿಶೀಲಿಸಿದಾಗ, ಅವರು ಸೂಕ್ತ ವರದಿಯನ್ನು ಸಲ್ಲಿಸುವಂತೆ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ರವರಿಗೆ ತಿಳಿಸಿದ್ದಾರೆ.

11. ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಮತ್ತು ದಿನಾಂಕ: 11/10/2017 ರಂದು ವಿಭಾಗೀಯ ನಿಯಂತ್ರಕರು, ಕೆ.ಎಸ್.ಆರ್.ಟಿ.ಸಿ., ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಾನ್ಯ ಗೌರವಾನ್ವಿತರ ಮುಂದೆ ಮಂಗಳೂರು ಕ್ಯಾಂಪ್‌ನಲ್ಲಿ ಹಾಜರಿದ್ದು, ಅನಧಿಕೃತವಾಗಿ ಓಡಾಡುವ ಬಸ್‌ಗಳ ಮೇಲೆ ಕ್ರಮ ತೆಗೆದುಕೊಂಡು ಸಾರ್ವಜನಿಕರಿಗೆ ಸೂಕ್ತ ಕೆ.ಎಸ್.ಆರ್.ಟಿ.ಸಿ., ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದಾಗಿ ತಿಳಿಸಿದ್ದರೂ ಸಹಿತ, ದಿನಾಂಕ: 23/07/2019ರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿಯವರ ಪತ್ರದೊಂದಿಗೆ ಹಾಜರುಪಡಿಸಿರುವ ಹಿರಿಯ ಮೋಟಾರು ವಾಹನ ನಿರೀಕ್ಷಕರ ವರದಿಯನ್ನು ಪರಿಶೀಲಿಸಿದಾಗ, ಸಾರ್ವಜನಿಕರು ನಡೆದಾಡಿಕೊಂಡು ಹೋಗುತ್ತಿದ್ದು, ಹೆಚ್ಚುವರಿ ಬಸ್‌ನ ಬೇಡಿಕೆ ಇಟ್ಟಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

12. ಸಾರ್ವಜನಿಕರ ಬೇಡಿಕೆ ಹಾಗೂ ಪ್ರತಿನಿತ್ಯ ಓಡಾಡುವ ಜನರ ಜನಸಂಖ್ಯೆಯ ಅಂದಾಜು ಆಧಾರವನ್ನಿಟ್ಟುಕೊಂಡು, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮತ್ತು ಇತರೆ ಸಾರ್ವಜನಿಕರಿಗೆ ಅನುಕೂಲಕರವಾಗುವ ಸಾರಿಗೆ ವ್ಯವಸ್ಥೆಯನ್ನು ಒದಗಿಸುವಂತೆ ಮತ್ತು ಅನಧಿಕೃತವಾಗಿ ಸಾರ್ವಜನಿಕರಿಗೆ ತೊಂದರೆ ಕೊಡುವ ರೀತಿಯಲ್ಲಿ ಓಡಾಡುತ್ತಿರುವ ಖಾಸಗಿ ಬಸ್‌ಗಳ ಮಾಲೀಕರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಎದುರುದಾರರ ಸಕ್ಷಮ ಪ್ರಾಧಿಕಾರದವರಿಗೆ ನಿರ್ದೇಶಿಸುವುದು ಸಮಂಜಸವಾಗುತ್ತದೆಂದು ಅಭಿಪ್ರಾಯಿಸಿದ್ದೇನೆ.

13. ಆದ್ದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಸಾರ್ವಜನಿಕರ ಬೇಡಿಕೆ ಹಾಗೂ ಪ್ರತಿನಿತ್ಯ ಓಡಾಡುವ ಜನರ ಜನಸಂಖ್ಯೆಯ ಅಂದಾಜು ಆಧಾರವನ್ನಿಟ್ಟುಕೊಂಡು, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮತ್ತು ಇತರೆ ಸಾರ್ವಜನಿಕರಿಗೆ ಅನುಕೂಲಕರವಾಗುವ ಸಾರಿಗೆ ವ್ಯವಸ್ಥೆಯನ್ನು ಒದಗಿಸುವಂತೆ ಮತ್ತು ಅನಧಿಕೃತವಾಗಿ ಸಾರ್ವಜನಿಕರಿಗೆ ತೊಂದರೆ ಕೊಡುವ ರೀತಿಯಲ್ಲಿ ಓಡಾಡುತ್ತಿರುವ ಖಾಸಗಿ ಬಸ್‌ಗಳ ಮಾಲೀಕರ ಮೇಲೆ ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ

ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

12/1/